ಪುಟ ಸಂಖ್ಯೆ: 05

ಅಸಲು ದಾವಾ ನಂಬರಃ 397/2018
ಪಿಡಬ್ಲ್ಯೂ: 01
ಶಿವಯ್ಯ ಹಿರೇಮಠ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು ದಿನಾಂಕಃ **-22/05/2023.**

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎ ಎಸ್ ಜೆ ವಕೀಲರಿಂದಃ

ನಾನು ನನ್ನ ಮೌಖಿಕ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು ಅದನ್ನು ನನ್ನ ಸೂಚನೆ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದನ್ನು ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ. ದಾವೆಗೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಈಗ ನೋಡುತ್ತಿರುವ ರಾಜೂರು ಗ್ರಾಮ ಪಂಚಾಯತಿ ಆಸ್ತಿ ನಂ 621/1, 621/2 ಎ, 621/8, 408/386 ಇವುಗಳ ಉತಾರ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ 4 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಕಾರ್ಯದರ್ಶಿ ಗ್ರಾಮ ಪಂಚಾಯತಿ ರಾಜೂರು ಇವರು ನೀಡಿರುವ ಮೂರು ಪುಟಗಳ ಆಸ್ತಿ ಪತ್ರಿಕೆ ಹಾಜರುಪಡಿಸಿದ್ದು ಅದನ್ನು ನಿಪಿ- 5 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಕಾರ್ಯದರ್ಶಿ ಗ್ರಾಮ ಪಂಚಾಯತಿ ರಾಜೂರು ಇವರು ನೀಡಿರು ಠರಾವು ನಕಲು ಪ್ರತಿ ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಪಿ ಡಿ ಓ ಗ್ರಾಮ ಪಂಚಾಯತಿ ರಾಜೂರು ಇವರು ನೀಡಿರುವ ಪ್ರೊಸಡಿಂಗ್ಸ ಬುಕ್ಕ ಇದರ ಎರಡು ಪುಟಗಳ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಪಿ ಡಿ ಓ ಗ್ರಾಮ ಪಂಚಾಯತಿ ರಾಜೂರು ಇವರು ನೀಡಿರುವ ದೃಡಿಕರಣ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಪಿ ಡಿ ಓ ಗ್ರಾಮ ಪಂಚಾಯತಿ ರಾಜೂರು ಇವರು ನೀಡಿರುವ ಸನ್ 1958-59 ಸಾಲಿನ ಆರು ಪುಟಗಳ ಆಕರಣಿ ಯಾದಿ ದೃಢಿಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ-9

ಎಂದು ಗುರುತಿಸಲಾಯಿತು.

ದಾವೆಯಲ್ಲಿ ಕೋರಿದಂತೆ ಆದೇಶ ಮಾಡಲು ಕೇಳಿಕೊಳ್ಳುತ್ತೇನೆ.

-2-

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆ ಸಮಯ ಅವಕಾಶ ಕೇಳಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ನೀಡಲಾಯಿತು.)

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಕೇ ಹೇ ಸರಿ ಇದೆ.**

**ದಿವಾಣಿ ನ್ಯಾಯಾಧೀಶರು ರೋಣ.**